ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 70-74
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಹರಿಹರನ ರಗಳೆಗಳು : ಸಾಮಾಜಿಕ ಸಂದರ್ಭ

**ಡಾ. ಜಾಜಿ ದೇವೇಂದ್ರಪ್ಪ**

ಸಂಯೋಜಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ.

***Abstract:***

*ಕನ್ನಡದ ಕವಿ ಮಹಾಪ್ರತಿಭೆಗಳಲ್ಲಿ ಒಬ್ಬನಾದ ಹರಿಹರನ ರಚನೆಗಳು ಗತಕಾಲ ಮತ್ತು ವರ್ತಮಾನದ ಸಾಮಾಜಿಕ ಸಂಗತಿಗಳನ್ನು ಮುಖಾಮುಖಿ ಮಾಡುತ್ತವೆ. ಕನ್ನಡ ಸಾಹಿತ್ಯ ಲೋಕದಲ್ಲಿ ಕಳೆದ ಶತಮಾನ ಮಹಾಕವಿ ಹರಿಹರನನ್ನು ಅಧ್ಯಯನ ಮಾಡಿದ ಸಾಂಪ್ರದಾಯಿಕ ನೆಲೆಗಳು ನಮ್ಮೆದುರಿಗಿವೆ. ಈತನನ್ನು ಭಕ್ತಮಹಾಕವಿಯೆಂಬ ವಿಶೇಷಣದಿಂದ ಕರೆಯುತ್ತಲೇ ಆತ ರೂಪಿಸಿದ ಭಕ್ತಿಯ ವಿವಿಧ ಆಯಾಮಗಳನ್ನು ಹಳೇ ಭಕ್ತಿಯ ವಿಧಾನದಲ್ಲಿ ಚರ್ಚಿಸಲಾಯಿತು. ಹರಿಹರನ ಗಿರಿಜಾ ಕಲ್ಯಾಣ ಮತ್ತು ಎಲ್ಲಾ ರಗಳೆಗಳನ್ನು ಭಕ್ತಿಯ ಮೇಲ್‌ಚಹರೆಯಿಟ್ಟುಕೊಂಡೇ ಆ ಅಭಿವ್ಯಕ್ತಿಯ ಒಳಗಣ ಆಂತರಿಕ ಚಲನೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕರ್ನಾಟಕದಲ್ಲಿ ವಚನಕಾರರ ನಂತರದ ಸಾಮಾಜಿಕ ಸಂದರ್ಭ ಕಠಿಣವಾದದ್ದು. ಇಂತಹ ಸಂದರ್ಭದಲ್ಲಿ ಸಮಾಜವನ್ನು ಎದುರಿಟ್ಟು ಈಜಿದ ಹರಿಹರನ ಬರಹಗಳು ಬಂಡಾಯದ ಸ್ವರೂಪವನ್ನು ಪಡೆದಿವೆ.*

***Keywords:*** *ರಗಳೆ ಸಾಹಿತ್ಯ, ಹರಿಹರನ ರಗಳೆ, ವಚನಗಳು, ಸಾಮಾಜಿಕ ಸಂದರ್ಭ.*

**ಪೀಠಿಕೆ**

ಕನ್ನಡ ಸಾಹಿತ್ಯ ಲೋಕದಲ್ಲಿ ಕಳೆದ ಶತಮಾನ ಮಹಾಕವಿ ಹರಿಹರನನ್ನು ಅಧ್ಯಯನ ಮಾಡಿದ ಸಾಂಪ್ರದಾಯಿಕ ನೆಲೆಗಳು ನಮ್ಮೆದುರಿಗಿವೆ. ಹರಿಹರ ವಚನೋತ್ತರ ಕಾಲದಲ್ಲಿ ಬರೆಯಲಾರಂಭಿಸಿದ ಕಾರಣದಿಂದ ನಮ್ಮ ವಚನಕಾರರ ಸಮಾಜೋ ರಾಜಕೀಯ ಹೋರಾಟಗಳು ಮತ್ತು ಅವರು ರೂಪಿಸಬಯಸಿದ ಜಾತಿ, ವರ್ಗರಾಹಿತ್ಯ ಸಾಮಾಜಿಕ ವಿನ್ಯಾಸದ ಸೈದ್ಧಾಂತಿಕ, ಪ್ರಾಯೋಗಿಕ ತಂತ್ರಗಳು ಹರಿಹರನ ಬರಹಕ್ಕೆ ದೊಡ್ಡ ಪ್ರೇರಣೆಯಾಗಿರುವುದನ್ನು ಗಮನಿಸಬೇಕು. ಹರಿಹರ ವಚನಕಾರರನೇಕರನ್ನು ತನ್ನ ರಗಳೆಗಳ ಬಂಧದಲ್ಲಿ ವಸ್ತುವನ್ನಾಗಿಟ್ಟುಕೊಂಡು ಕಟ್ಟಿದ ಕಥನಕ್ರಮ ತುಂಬ ವಿನೂತನ ಪ್ರಯೋಗವಾಗಿದೆ. ತನ್ನ ಕಾಲದ ಸಾಮಾಜಿಕ ಚಹರೆಯೂ ಕೆಲವೆಡೆ ಕಾವ್ಯದ ಪರಿಚಲನೆಯಾಗಿ ಕೆಲಸ ಮಾಡಿದೆ. ಶರಣಬಂಡಾಯದ ತಾತ್ವಿಕತೆಯು ಬಿಟ್ಟುಬಿಡದೇ ಹರಿಹರನನ್ನು ಕಾಡಿದೆ.

ಕರ್ನಾಟಕದಲ್ಲಿ ವಚನಕಾರರ ನಂತರದ ಸಾಮಾಜಿಕ ಸಂದರ್ಭ ಕಠಿಣವಾದದ್ದು. ಇಂತಹ ಸಂದರ್ಭದಲ್ಲಿ ಸಮಾಜವನ್ನು ಎದುರಿಟ್ಟು ಈಜಿದ ಹರಿಹರನ ಬರಹಗಳು ಬಂಡಾಯದ ಸ್ವರೂಪವನ್ನು ಪಡೆದಿವೆ. ವಚನೋತ್ತರ ಕಾಲ ಕನ್ನಡದ ನೆಲದಲ್ಲಿ ವಿಚಿತ್ರ ವಿದ್ಯಮಾನಕ್ಕೆ ಸಾಕ್ಷಿ. ಶರಣರು ಬಯಸಿದ ವರ್ಗ–ಜಾತಿರಾಹಿತ್ಯ ಸಮಾಜಕ್ಕಾಗಿ ಹೋರಾಟ ಯುದ್ಧಮುಗಿದ ಸಂಕೀರ್ಣಕಾಲ. ವೈದಿಕಶಾಹಿ ಅಟ್ಟಹಾಸ ಮೆರೆದು ಮತ್ತೆ ಕೂಗು ಹಾಕುತ್ತಿದ್ದ ಕಾಲದಲ್ಲಿ ಹರಿಹರನ ಅಭಿವ್ಯಕ್ತಿ ತುಂಬ ಮಹತ್ವದ್ದು. ಹರಿಹರನ್ನು ವೀರಶೈವಧರ್ಮದ ಪುನರುತ್ಥಾನ ಮಾಡುವ ಕವಿಯೆಂತಲೂ, ಈತನೊಬ್ಬ

***Please cite this article as:*** ಜಾಜಿ ದೇವೇಂದ್ರಪ್ಪ. (2023). ಹರಿಹರನ ರಗಳೆಗಳು : ಸಾಮಾಜಿಕ ಸಂದರ್ಭ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 70–74

ಸಾಂಪ್ರದಾಯಿಕ ಧರ್ಮವನ್ನು ಬಿಡದೇ ಇರುವ ಕವಿಯೆಂತಲೂ, ಸ್ತ್ರೀ ವಿರೋಧಿ ನೆಲೆಗಳನ್ನು ಹೇರಳವಾಗಿ ಬರೆದ ಕವಿಯೆಂತಲೂ, ಸಾಂಸ್ಥಿಕ ಅಸ್ಮಿತೆಗೆ ಮತ್ತೆ ರೂಪಕೊಡಲು ಮುಂದಾದ ಕವಿಯೆಂತಲೂ, ಬರಹದ ದೃಷ್ಟಿಯಿಂದ ಸರಳ ಮಾದರಿಯನ್ನು ಆಯ್ಕೆಮಾಡಿಕೊಂಡವನೆಂತಲೂ, ಪರಮತವನ್ನು ನಿಂದನೆಮಾಡಲು ತನ್ನ ಸಾಹಿತ್ಯವನ್ನು ಮೀಸಲಿಟ್ಟವನೆಂದೂ, ಶೈವ ಹಾಗೂ ವೀರಶೈವಗಳ ನಡುವಣ ದ್ವಂದ್ವ ನಿರೂಪಕನೆಂತಲೂ ವಿಭಿನ್ನ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡಲಾಗಿದೆ. ಈ ಎಲ್ಲ ಸಂಗತಿಗಳನ್ನು ಒಂದು ಬದಿಯಲ್ಲಿಟ್ಟು ಹರಿಹರ ತನ್ನಕಾಲದ ಸಾಮಾಜಿಕ ಸಂಗತಿಗಳನ್ನು ನಿಭಾಯಿಸಿದ ರೀತಿಯನ್ನು ಪ್ರಮುಖವಾಗಿ ನೋಡಬೇಕು. ಧರ್ಮ ಮತ್ತು ದೇವರು ಆ ಕಾಲದಲ್ಲಿ ಬರಹಕ್ಕೆ ತಂದ ಸಾಮಾಜಿಕ ಒತ್ತಡಗಳನ್ನು ಒಬ್ಬ ಲೇಖಕ ನಿಭಾಯಿಸಿದ ಜವಬ್ದಾರಿಗಳನ್ನು ಎತ್ತಿ ತೋರಿಸಬೇಕಾಗಿದೆ. ಜೈನ–ವೀರಶೈವ–ವೈಷ್ಣವ ಧರ್ಮಗಳು ತೀರಾ ಜಿಡ್ಡುಹಿಡಿದು ತಮ್ಮ ತಮ್ಮ ಮತ–ಧರ್ಮದ ಬಿತ್ತನೆಗೆ ತೊಡಗಿ ಪರಮತದ ದೂಷಣೆಯಲ್ಲಿ ನಿರತವಾದಾಗ ಒಬ್ಬಕವಿಯು ಅಂತಹ ಸಂಕೀರ್ಣ ಸಮಾಜವನ್ನು ತನ್ನ ಅರಿವಿನ ವಿಸ್ತಾರದಲ್ಲಿ ಮೂಸನೋಡಿದ್ದೊಂದು ವಿಶೇಷವೇ.

ಹರಿಹರ ತನ್ನ ರಗಳೆಗಳಲ್ಲಿ ಶರಣರ ದಾರ್ಶನಿಕತೆಯನ್ನು ನಿರೂಪಿಸದೇ ಕೇವಲ ವೈದಿಕವಿರೋಧಿ ನೆಲೆಯ ಚೌಕಟ್ಟಿನಲ್ಲಿಟ್ಟು ಕಥೆಯನ್ನು ನಿರೂಪಿಸುತ್ತಾನೆಂಬ ಆರೋಪಗಳೂ ಇವೆ. ಆದರೆ ಒಬ್ಬಕವಿ ತನ್ನ ಕಾಲದ ಇಂತಹ ಸಾಮಾಜಿಕ ಒತ್ತಡಗಳಿಗೆ ತೀವ್ರ ಪ್ರತಿರೋಧ ಒಡ್ಡುವ ಸಂಗತಿಗಳ ಒಳಗಡೆಯೇ ಸೂಕ್ಷ್ಮವಾಗಿ ದಾರ್ಶನಿಕ ನೆಲೆಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ. ಶರಣಸಂಕುಲ ಆಗತಾನೆ ವೈಚಾರಿಕ ತಳಹದಿಯ ಮೇಲೆ ಸಮಾಜವನ್ನು ಕಟ್ಟುವ ಹೋರಾಟದ ಚರಿತ್ರೆಯನ್ನು ಮುಂದಿನ ಬರೆಹಗಾರರಿಗೆ ರವಾನಿಸಿಯಾಗಿತ್ತಾದರೂ ಹರಿಹರನ ಒಳಗೋಡೆ ಇದಕ್ಕೆ ಭಿನ್ನವಾದ ಸಾಮಾಜಿಕ ಸ್ವರೂಪ ಅಥವಾ ಜೀವನ ಕ್ರಮದಲ್ಲಿ ಬೆಳೆದಿದ್ದರಿಂದ ಆತನ ಬರೆಹ ದಾರ್ಶನಿಕತೆಯನ್ನು ಹೇಳದ ಅಸಹಾಯಕತನಕ್ಕೆ ಬಂದಿತು. ಆದರೆ ಇದು ಅವನ ಅಭಿವ್ಯಕ್ತಿಯ ಲೋಪವು ಅಲ್ಲ, ಬದ್ಧತೆಯ ಪ್ರಶ್ನೆಯೂ ಅಲ್ಲ. ಹರಿಹರ ರೂಪಿಸಿದ ಕ್ರಾಂತಿಕಾರಕ ವಸ್ತು, ವಿನ್ಯಾಸದ ರಗಳೆಗಳ ಆಂತರಿಕ ಚಲನೆಯಲ್ಲಿ ಈ ಲೋಕದ ವಿಸ್ತಾರವಾದ ಸಾಮಾಜಿಕ ಅರಿವು ಜಾಗೃತವಾಗಿಯೇ ಇದೆ. ವಿಭಿನ್ನ ಸ್ತರವಿನ್ಯಾಸದ ಕಥನಕ್ರಮಗಳನ್ನು ಹರಿಹರನಲ್ಲಿ ಮಾತ್ರ ನೋಡಲು ಸಾಧ್ಯ. ಆದುದರಿಂದ ಹರಿಹರ ತನ್ನ ಕಾಲದಲ್ಲಿನ ಸಮಕಾಲೀನ ಸಂದರ್ಭದ ಸಾಮಾಜಿಕ ದರ್ಶನವನ್ನು ವಿವಿಧ ಆಯಾಮಗಳಲ್ಲಿ ತೋರಿಸಿದ ಏಕೈಕ ಕವಿಯೆನ್ನಲು ಯಾವ ಹಿಂಜರಿಕೆಯಿಲ್ಲ.

ಹರಿಹರನ ರಚನೆಯಲ್ಲಿ ಬರುವ ಸಮಾಜದ ಎರಡು ದಡಗಳೆಂದರೆ ಒಂದು ಕೆವರ್ಗದ ಸಮುದಾಯ, ಎರಡು ಪುರೋಹಿತ ಮತ್ತು ಪ್ರಭುತ್ವಶಾಹಿ ಸಮುದಾಯ. ಈ ಎರಡನ್ನು ಧಾರ್ಮಿಕ ಸ್ವರೂಪದಲ್ಲಿಯೇ ಸಂಘರ್ಷಗೊಳಿಸಿ ಮುಖಾಮುಖಿ ಮಾಡುವ ಮುಂಚಲನೆಯಲ್ಲಿಯೇ ಸಮಾಜದ ವಿರಾಟ್‌ಸ್ವರೂಪದ ನಿಜ ಅರಿವು ಆಗುತ್ತದೆ. ಹರಿಹರನ ಸಾಹಿತ್ಯದೊಳಗಣ ಸಾಮಾಜಿಕ ವಿನ್ಯಾಸವನ್ನು ನೋಡುವಾಗ ಮುಖ್ಯವಾಗಿ ಆತನ ಕಾಲದ ಪ್ರಜ್ಞೆಯ ಚೌಕಟ್ಟಿನೊಳಗಡೆಯೇ ನೋಡಬೇಕು. ತನ್ನ ಅಭಿವ್ಯಕ್ತಿಯ ಉದ್ದಕ್ಕೂ ಸಮಾಜದ ಮೇಲ್‌ವರ್ಗದ ಮತ್ತು ಪ್ರಭುತ್ವಗಳನ್ನು ಎದುರು ಹಾಕಿಕೊಂಡ ಅವನ ಬರಹದ ವ್ಯವಸಾಯ ವಾಸ್ತವವಾದದ್ದು, ವೈಚಾರಿಕವಾದದ್ದು ಹಾಗೂ ವರ್ತಮಾನಕ್ಕೂ ಮಾದರಿಯಾದದ್ದು. ಈ ಮಾದರಿಯು ಪುರಾಣ ಮತ್ತು ಇತಿಹಾಸಗಳ ಸಮ್ಮಿಲನದಿಂದ ರೂಪಗೊಂಡದ್ದೆಂಬುದನ್ನೂ ಕೂಡ ಗಮನಿಸಬೇಕು. ಹರಿಹರನಿಗೆ ಚರಿತ್ರೆಯೂ, ಪುರಾಣವೂ ಎರಡೂ ಅಭಿನ್ನವಾದವು ಹಾಗೆಯೇ ಅನನ್ಯವಾಗಿ ಕಟ್ಟಿಕೊಡುವ ಸಾಹಸವೂ ಕೂಡ. ಪ್ರಜ್ಞೆಪುರಾಣ ಆದರೂ ಅದರೊಳಗೊಂದು ಸಮಾಜ

ಖಂಡಿತವಾಗಿಯೂ ಇದೆಯೆಂಬುದು ಅರಿಯಬೇಕು. ಹರಿಹರ ದರ್ಶಿಸಿದ ತನ್ನ ಕಾಲದ ಸಾಮಾಜಿಕ ಸಂದರ್ಭವನ್ನು ಕೆಲವು ನಿದರ್ಶನಗಳಿಂದ ನೋಡಬಹುದು.

ಮಲುಹಣನ ರಗಳೆಯಲ್ಲಿ ಮಲುಹಣ ಶ್ರೀಮಂತಿಕೆಯ ಮನೆಯಿಂದ ಬಂದ, ಪ್ರಭುತ್ವದ ಭಾಗವಾಗಿಯೂ ಅಂದರೆ ಮಂತ್ರಿಯ ಮಗನಾಗಿಯೂ ಇದ್ದವನು. ಇವನ ಪ್ರೀತಿಯು ಕೊನೆಗೆ ಹೋಗುವುದು ವೇಶ್ಯೆಯ ಮಗಳಾದ ಮಲುಹಣಿಯ ಮನೆಗೆ. ಪ್ರಭುತ್ವಶಾಹಿಯ ಪ್ರತಿನಿಧಿಯನ್ನು ಅಂಚಿನ ಸಮಾಜದ ಒಬ್ಬ ವೃತ್ತಿಪರ ವೇಶ್ಯೆಯ ಜೊತೆ ಮದುವೆ ಮಾಡಿಸುವ ಹರಿಹರ ಅಷ್ಟಕ್ಕೆ ಸುಮ್ಮನಾಗದೇ ಮಲುಹಣಿಯನ್ನು ಶಿವಗಣ ಪದವಿ ಪಡೆಯುವಂತೆ ಮಾಡುತ್ತಾನೆ. ಏಕಕಾಲಕ್ಕೆ ಇಲ್ಲಿ ಸಾಮಾಜಿಕ ತರ–ತಮಗಳನ್ನು ಒಡೆದು ಎಲ್ಲಾ ವರ್ಗಗಳ ಜೊತೆ ವೈವಾಹಿಕ ಸಂಬಂಧಗಳನ್ನು ಮಾಡುವ ಸಂದೇಶ ಕೊಡುತ್ತಾನೆ. ಮಾತ್ರವಲ್ಲ ಮಲುಹಣಿಯಂತಹ ವೇಶ್ಯೆಯ ಮಗಳು ಕೂಡ ತನ್ನ ವೈಯಕ್ತಿಕ ಬದ್ಧತೆಯ ಕಾರಣದಿಂದ ಉನ್ನತವಾದ ಪದವಿಯನ್ನು ಪಡೆಯಬಹುದೆಂಬ ನಿಚ್ಚಳ ಸಂದೇಶವಿದೆ. ಆಧುನಿಕ ಕಾಲದಲ್ಲಿಯೂ ಡಾ.ಅಂಬೇಡ್ಕರ್, ಲೋಹಿಯಾ, ಗಾಂಧಿಯವರ ಚಿಂತನಾಕ್ರಮಗಳು ಈ ಧಾರೆಯ ಮುಂದುವರಿಕೆಯಾಗಿದೆಯೆಂಬ ಸೂಕ್ಷ್ಮಗಳನ್ನು ಅಪ್ರಜ್ಞಾಪೂರ್ವಕವಾಗಿಯಾದರೂ ನೋಡಬೇಕು.

ಅಂತೆಯೇ ತನ್ನ ಕಾಲದ ಜಾತಿವ್ಯವಸ್ಥೆಯ ಕ್ರೂರ ರೂಪಗಳನ್ನು ತುಂಬ ಸರಳವಾಗಿ ಒಡೆಯುವ ಒಂದು ವಿಧಾನವನ್ನು ಹರಿಹರ ಮಹಾಕವಿ ಕಂಡುಕೊಂಡಿದ್ದಾನೆ. ಬೇಡರ ಕಣ್ಣಪ್ಪನ ರಗಳೆಯನ್ನು ಗಮನಿಸುವುದಾದರೆ, ಅಪಾರ ಶಿವಭಕ್ತಿಯನ್ನು ತನ್ನ ಎದೆಯಲ್ಲಿ ಅಡಗಿಸಿಕೊಂಡಿರುವ ಬುಡಕಟ್ಟು ಸಮುದಾಯದ ಕಣ್ಣಪ್ಪ ಅಡವಿಯಲ್ಲಿ ಇರುವ ಶಿವಾಲಯದಲ್ಲಿ ಶಿವಲಿಂಗವನ್ನು ತನ್ನ ಕಾಲಿನಿಂದಲೇ ಶುಶ್ರೂಷೆ ಮಾಡಿದ ಕ್ರಾಂತಿಕಾರಕ ನೆಲೆಯೂ ಗಮನಿಸಬೇಕು. ಇದು ಆ ಶಿವಾಲಯದ ಪುರೋಹಿತ ಮತ್ತು ಕಣ್ಣಪ್ಪನ ನಡುವೆ ನಡೆದ ಒಂದು ಜಾತಿಯ ಚರ್ಚೆಯೂ–ಸಂಘರ್ಷವೂ ಆಗಿ ಕೊನೆಗೆ ಶಿವ ಕಣ್ಣಪ್ಪನ ಭಕ್ತಿಯನ್ನು ಒಪ್ಪಿ ಸ್ವೀಕರಿಸುವ ಪ್ರಕ್ರಿಯೆಯೇ ಈ ದೇಶದ ತಳಸಮುದಾಯಗಳ ಭಕ್ತಿಯ ನೈತಿಕ ಸ್ಥೈರ್ಯಕ್ಕೆ ಬಹುದೊಡ್ಡ ಪ್ರೇರಣೆ. ಆಧುನಿಕ ಕಾಲದಲ್ಲಿ ಡಾ. ಬಾಬಾ ಸಾಹೇಬರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಮಾಡಿಸುವ ಹೋರಾಟವನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಈ ಎರಡು ಸಮಾನ ಘಟನೆಗಳೇ. ಆ ಕಾಲದಲ್ಲಿಯೇ ಕಣ್ಣಪ್ಪ ದೇವಾಲಯ ಪ್ರವೇಶ ಮಾಡುವ, ದೇವರ ಮುಟ್ಟುವ ಆ ಮೂಲಕ ಶಿವನನ್ನು ಒಲಿಸಿಕೊಂಬುದು ತತ್ಕಾಲೀನ ಸಮಾಜದ ಕೆಲವು ಸಮುದಾಯಗಳಿಗೆ ಶಕ್ತಿಯನ್ನು ಊರ್ಜನೆ ಮಾಡಿದೆಯೆಂಬುದು ಮುಖ್ಯ. ಈ ರಗಳೆಯಲ್ಲಿ ಆಹಾರ ಸಂಸ್ಕೃತಿಯ ಸಂವಾದವೂ ಇದೆ. ಕಾಡುಬೇಟೆಗಳನ್ನು ತಿನ್ನುವ ಕಣ್ಣಪ್ಪನಂತಹ ಶ್ರೀಸಾಮಾನ್ಯನೂ ದೇವರನ್ನು ನೋಡಬಹುದು. ಆಹಾರ ಆಯಾ ಸಮುದಾಯಗಳ ನೈತಿಕಹಕ್ಕು ಎಂಬ ಪ್ರತಿಪಾದನೆಯನ್ನು ಇಲ್ಲಿ ನೋಡಬಹುದು. ಆಧುನಿಕ ಕಾಲದ ಈ ಸಂದರ್ಭದಲ್ಲಿಯೂ ದೇಶದಲ್ಲಿ ಆಹಾರ ಕಾರಣವಾಗಿ ಸಮುದಾಯಗಳನ್ನು ಧರ್ಮ–ಜಾತಿ–ಕೀಳು ನೆಲೆಯಲ್ಲಿ ನೋಡುವ ನೋಟ ಕ್ರಮಕ್ಕೆ ಕಣ್ಣಪ್ಪನ ರಗಳೆಯು ಖಂಡಿತಾ ಉತ್ತರವನ್ನು ನೀಡುತ್ತದೆ. ಅಲ್ಲದೇ ವೈದಿಕಶಾಹಿ ಆಹಾರ ಸಂಸ್ಕೃತಿಗೆ ಸೆಡ್ಡುಹೊಡೆಯುವಂತಿರುವ ಸಾಮವೇದಿಯ ರಗಳೆಯಲ್ಲಿ ಶ್ವಪಚಯ್ಯನ ಆಹಾರ ಕ್ರಮವಿದೆ. ಅಂತೆಯೇ ಯಾವ ಆಹಾರವಾದರೂ ಅದು ಶಿವನಿಗೆ ಪ್ರಿಯ. ಆದರೆ ಭಕ್ತಿ, ನಿಷ್ಠೆಯಿರಬೇಕೆಂದು ಸಾರುವ ಫಿಲಾಸಫಿ ಆಧುನಿಕ ಭಾರತಕ್ಕೆ ಆದರ್ಶವಾದುದು. ಮೂರ್ತಿಪ್ರಜ್ಞೆಯ ಮೂಲಕ ಸಾಂಸ್ಥೀಕರಣಗೊಂಡಿದ್ದ ಆ ಮೂಲಕ ಶೋಷಣೆಯ ಸ್ವರೂಪವನ್ನು ಪಡೆದಿದ್ದ ದೇವಾಲಯ ಪರಿಕಲ್ಪನೆಯನ್ನು ಶರಣರು ಧಿಕ್ಕರಿಸಿದರು. ಹಾಗೆ ಅದರ ಮುಂದುವರಿಕೆಯಾಗಿ ಹರಿಹರ ನಾಯನಾರ್ ಭಕ್ತನ ಮೂಲಕ ಇದನ್ನು

ಒಡೆಯುತ್ತಾನೆ. ಕಕ್ಕೆಗಿಡವೊಂದರಲ್ಲಿ ಶಿವನನ್ನು ಕಾಣುವ ನಾಯನಾರ್ ಒಬ್ಬ ಆದರ್ಶವಂತ.

ಹರಿಹರನ ರಗಳೆಗಳಲ್ಲಿ ನಿರೂಪಿತಗೊಂಡ ಸಾಮಾಜಿಕ ವಿನ್ಯಾಸ ವಿಚಿತ್ರವಾದ ಆಯಾಮಗಳನ್ನು ಪಡೆದುಕೊಂಡಿದೆ. ಸಮಾಜದಲ್ಲಿ ಬದುಕುವ ಮನುಷ್ಯ ಮೊದಲು, ದೇವರು ನಂತರವೆಂಬ ಆತ್ಯಂತಿಕ ಸತ್ಯ ಹೇಳುತ್ತಾನೆ ಕವಿ. ಇದು ಶರಣರ ಆಶಯದ ಮುಂದುವರೆದ ಭಾಗ. ಕಾಯಕದಲಿ ನಿರತನಾದೊಡೆ ಎಲ್ಲವನ್ನೂ ಮರೆಯುವ ಆಶಯ. ಮೆರೆಮಿಂಡದೇವ ಸಾಕ್ಷಾತ್ ಶಿವನನ್ನೇ ಬಹಿಷ್ಕರಿಸುವ ಕತೆಯೊಂದಿದೆ. ವೃತ್ತಿಪರತೆಯೇ ಮನುಷ್ಯ ಜೀವನ ವ್ಯಾಪಾರದ ಮುಖ್ಯವಾದ ಭಾಗಯೆನ್ನುತ್ತಾನೆ ಹರಿಹರ. ನಿಂಬಿಯಕ್ಕನ ಕತೆಯಲ್ಲಿ ಸಮಾಜದ ವಿಚಿತ್ರ, ವಿಭಿನ್ನ ನೋಟವನ್ನು ದರ್ಶನ ಮಾಡಿಸುತ್ತಾನೆ. ಜೀವನೋಪಾಯಕ್ಕಾಗಿ ವೇಶ್ಯಾವೃತ್ತಿಯನ್ನು ಮಾಡಲು ಮುಂದಾದ ನಿಂಬಿಯು ಪರಮ ಭಕ್ತಿವಂತಳಾಗಿ ಗೋಚರಿಸುತ್ತಾಳೆ. ಶಿವಾಲಯದಲ್ಲಿ ಲಿಂಗದ ಪೂಜೆಯಲ್ಲಿದ್ದಾಗಲೇ ಗಿರಾಕಿಯೊಬ್ಬ ಆಕೆಯ ಸಂಗವನ್ನು ಬಯಸುತ್ತಾನೆ. ಶಿವಲಿಂಗವನ್ನೇ ದಿಂಬುಮಾಡಿಕೊಂಡು ಅವನಿಗೆ ದೇಹಸುಖಕೊಡುವ ನಿಂಬಿಯ ಈ ಘಟನೆಯು ಯಾವ ದೃಷ್ಟಿಕೋನದಿಂದ ಚರ್ಚಿಸಿದರೂ ಅದು ಈ ಸಮಾಜದ ವಿಭಿನ್ನ ಅತ್ಯಾದರ್ಶ ನೆಲೆಯನ್ನು ಪ್ರತಿನಿಧಿಸುತ್ತದೆ. ಹರಿಹರನ ರಗಳೆಗಳಲ್ಲಿ ಸಾಮಾಜಿಕ ಆದರ್ಶದ ಭಾಗವಾಗಿ ಇಲ್ಲವೇ ಸಾಮಾಜಿಕ ನ್ಯಾಯದ ಭಾಗವಾಗಿ ಕಾವ್ಯದ ನಾಯಕರು ಇದ್ದಾರೆ. ಮಲುಹಣಿಯಂಥವಳು ಕಾವ್ಯದ ನಾಯಕಿ ಆಗುತ್ತಾಳೆ. ಕುಂಬಾರ ವೃತ್ತಿಯ ಗುಂಡಯ್ಯ ಒಂದು ಕಾವ್ಯದ ಆದರ್ಶ ನಾಯಕನಾಗುತ್ತಾನೆ. ಸಮಾಜದ ಕಟ್ಟಕಡೆಯ ಜಾತಿ–ವರ್ಗದವರೆಂದೆನಿಸಿಕೊಂಡ ಮಾದಾರ ಚೆನ್ನಯ್ಯನೂ ಕಾವ್ಯದ ಕೇಂದ್ರವಸ್ತು ಮತ್ತು ನಾಯಕನಾಗುತ್ತಾನೆ. ಕಣ್ಣಪ್ಪನೂ ಕಾವ್ಯದ ನಾಯಕನಾಗುತ್ತಾನೆ. ಇಂತಹ ಹಲವು ಶೀರ್ಷಿಕೆಗಳು ರಗಳೆಗಿದೆ. ಇದೆಲ್ಲವೂ ಸಮಸಮಾಜದ ಆಶಯದ ಒಂದು ಪರಿಕ್ರಮವಾಗಿದೆ. ಯಾವ ವೈದಿಕಶಾಹಿಯು ಕಾವ್ಯದ ಕೇಂದ್ರಶಕ್ತಿಯನ್ನಾಗಿ ತಳಸಮುದಾಯಗಳನ್ನು ತರಲು ನಿರಾಕರಿಸಿತ್ತೋ ಅದು ಪ್ರತಿಭಟಿಸಿದಂತೆ ಹರಿಹರನ ರಗಳೆಗಳಲ್ಲಿ ಸಾಕಾರಗೊಂಡಿದೆ. ಇಂತಹ ಸೂಕ್ಷ್ಮ ಸಂಗತಿಗಳೇ ಕನ್ನಡದ ನೆಲದಲ್ಲಿ ದಲಿತಬಂಡಾಯ ಸಾಹಿತ್ಯದ ಒಂದು ಧಾರೆಯಾಗಿ ಮರುಸೃಷ್ಟಿಯಾದ ಬಗ್ಗೆಯೂ ಯೋಚಿಸಬೇಕು. ಅಲ್ಲದೇ ಪ್ರಭುತ್ವದ ಪ್ರತಿನಿಧಿಗಳಾಗಿದ್ದ ಕೆಲವು ರಾಜ, ಮಂತ್ರಿ, ದಂಡನಾಯಕರನ್ನು ಕೇವಲ ಸಾಮಾನ್ಯ ಭಕ್ತರಂತೆ ಚಿತ್ರಿಸುತ್ತಾನೆ. ಅರಮನೆಯಿಂದ ಸಾಮಾನ್ಯ ಭಕ್ತನಾಗಿಸುವ, ಕೂಲಿ, ಕನಿಷ್ಟನಾದವರನ್ನು ಮಹಾನ್ ಭಕ್ತ, ಆದರ್ಶರನ್ನಾಗಿ ಮಾಡುವ ಕಥೆಯ ಹಿಂದೆ ಖಂಡಿತವಾಗಿಯೂ ಮನುಷ್ಯಜಾತಿ ತಾನೊಂದೆವಲಂ ಎಂಬ ಉನ್ನತಾದರ್ಶವಿದೆ.

ಹರಿಹರನ ರಗಳೆಗಳಲ್ಲಿ ತುಂಬ ವಿಫುಲವಾಗಿ ಸಾಮಾಜಿಕ ಜೀವನ ಪದ್ಧತಿ, ಆಚರಣೆಗಳ ಉಲ್ಲೇಖಗಳಿವೆ. ಜನಸಮುದಾಯ (ಹರಿವಾಣದವರು, ಲೆಂಕರು, ಅಂಕರು, ಜೋಳವಾಳಿ, ಗಣಕರು, ಕರಣರು) ನಿರ್ವಹಿಸುತ್ತಿದ್ದ ವೃತ್ತಿಗಳು ತುಂಬ ಮಹತ್ವದವಾಗಿವೆ. ಗತಕಾಲದಲ್ಲಿ ಉಪಯೋಗಿಸುತ್ತಿದ್ದ ಕೃಷಿ ಉಪಕರಣಗಳು, ವೃತ್ತಿಗೆ ಬೇಕಾದ ಸಾಮಗ್ರಿ ಹಬ್ಬಹರಿದಿನ–ಆಟಮಾಟಗಳು, ಆಚರಣೆ ವಿಧಾನಗಳು, ಆಹಾರಕ್ರಮ ತಿಂಡಿ–ತಿನಿಸುಗಳು, ಹೂ–ಪತ್ರೆ, ಗಂಧಗಳು, ಪ್ರಾಣಿಸಂಕುಲಗಳು, ದೈವಸಮೂಹಗಳು–ಜನ ಸಮುದಾಯದ ಮನೋಸ್ಥಿತಿ, ಪುರೋಹಿತರ ಮನೋವಿಕೃತಿಗಳು, ಅನ್ಯಧರ್ಮಗಳ ಮೇಲಾಟ ಕೀಳಾಟಗಳು ಹೀಗೆ ಒಂದು ಸಮಾಜದ ಮೊತ್ತವಾಗಿರುವ ನೂರಾರು ಸಂದರ್ಭಗಳ ಚಿತ್ರಣ ಹಾಸುಹೊಕ್ಕಾಗಿ ಹರಿಹರನ ರಗಳೆಗಳಲ್ಲಿ ನಿರೂಪಿತಗೊಂಡಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಬಸವರಾಜ ಮಲಶೆಟ್ಟಿ. (ಸಂ.) (1984). *ಹರಿಹರನ ಹನ್ನೊಂದು ರಗಳೆಗಳು.* ಕೊಟ್ಟೂರು ಸ್ವಾಮಿ ಮಠ.

- ಗುರುಪಾದ ಮರಿಗುದ್ದಿ. (ಸಂ.). (2001). *ಹರಿಹರನ ವರ್ಗಬೇಧನಿರಸನ ರಗಳೆಗಳು.* ನೆಲೆ ಪ್ರಕಾಶನ.
- ಹಿರೇಮಠ, ಎಸ್.ಎಸ್. (1998). *ಹರಿಹರ ಚಿತ್ರಿಸಿದ ದಲಿತ ಶರಣರು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಕಲಬುರ್ಗಿ, ಎಂ.ಎಂ. (ಸಂ.) (1999). *ಹರಿಹರನ ರಗಳೆಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಶಿವಾನಂದ ವಿರಕ್ತಮಠ. (ಸಂ.) (2014). *ಹರಿಹರನ ರಗಳೆಗಳು ಸಾಂಸ್ಕೃತಿಕ ಮುಖಾಮುಖಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.